ಅ) ಬಂದಿದ್ದಲ್ಲಿ, ಅದನ್ನು ಸರಿಪಡಿಸಲು ಸರ್ಕಾರವು ಯಾವ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಹೌದು.

ಆ) ಭಾರತ ಸರ್ಕಾರದ ಅಂತರ್ಜಲ ಅಂದಾಜು ಸಮಿತಿಯು ನಿಗಧಿಪಡಿಸಿರುವ ಮಾರ್ಗಸೂಚಿಗಳ ಆಧಾರದ ಮೇಲೆ ಪ್ರದೇಶಗಳನ್ನು ಕಪ್ಪು, ಬೂದು ಅಥವಾ ಬಿಳಿ ಎಂದು ವರ್ಗೀಕರಿಸಲಾಗುವುದು. ಈ ಆಧಾರದ ಮೇಲೆ ರಾಜ್ಯ ಸರ್ಕಾರದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಸಮೀಕ್ಷೆಗಳನ್ನು ನಡೆಸಿ ಇಡೀ ರಾಜ್ಯದ ಅಂತರ್ಜಲ ಸ್ಥಿತಿಯ ಬಗ್ಗೆ1994ರಲ್ಲಿ ವರದಿಯನ್ನು ಪ್ರಕಟಿಸಿತ್ತು. ಈ ವರದಿಯನ್ನು ಆಧರಿಸಿ, ನಬಾರ್ಡ್ ಸಂಸ್ಥೆಯು ಸೂಳ್ಯ ತಾಲ್ಲೂಕನ್ನು ಕಪ್ಪು ಪ್ರದೇಶವೆಂದು ಘೋಷಿಸಿದೆ.

ರಾಜ್ಯ ಸರ್ಕಾರವು ಈಗ ಪುನರ್ ಸಮೀಕ್ಷೆ ಮಾಡಲು ಉದ್ದೇಶಿಸಿದೆ ಮತ್ತು ತದನಂತರ ನಬಾರ್ಡ್ ಸಂಸ್ಥೆಗೆ ಸೂಕ್ತ ಶಿಫಾರಸ್ಸನ್ನು ಕಳುಹಿಸಲಾಗುವುದು.

ಚಕ್ರ, ವರಾಹಿ ಯೋಜನಾ ಪ್ರದೇಶದಲ್ಲಿ ಜಮೀನು ಮನೆ ಕಳೆದು ಕೊಂಡವರಿಗೆ ವಿದ್ಯುತ್ ನಿಗಮದಿಂದ ಪರಿಹಾರ

1787 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಇಂಧನ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಕ್ರಾ-ವರಾಹಿ ಯೋಜನಾ ಪ್ರದೇಶದಲ್ಲಿ ಜಮೀನು ಮನೆ ಕಳೆದುಕೊಂಡ ರೈತರಿಗೆ ನೀಡಬೇಕಾದ ಪರಿಹಾರ ಧನ ಎಷ್ಟು ಬಾಕಿಯಿದೆ;

ಆ) ಕೋರ್ಟ್ ಮೊಕದ್ದಮೆಯಲ್ಲಿ ಡಿಕ್ರಿ ಪಡೆದಿರುವ ಪ್ರಕರಣದಲ್ಲಿ ಕಟ್ಟಬೇಕಾದ ಹಣವೆಷ್ಟು; ಎಷ್ಟು ಸಮಯದಿಂದ ಬಾಕಿಯಿದೆ,

ಇ) ಶಿವಮೊಗ್ಗ ಭೂಸ್ವಾಧೀನ ಅಧಿಕಾರಿಗಳ ಕಛೇರಿಗೆ ವಿದ್ಯುತ್ ನಿಗಮದಿಂದ ಸಾಕಷ್ಟು ಬಾರಿ ಈ ಬಗ್ಗೆ ಕೇಳಿಕೊಂಡಿದ್ದರೂ ಹಣ ನೀಡಲು ವಿಳಂಬಕ್ಕೆ ಕಾರಣಗಳೇನು, ಯಾವಾಗ ಚುಕ್ತ ಮಾಡಲಾಗುವುದು?

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಚಕ್ರಾ-ವರಾಹಿ ಯೋಜನೆಯಡಿ ಹಾಲಿ ವಿವಿಧ ನ್ಯಾಯಾಲಯಗಳಲ್ಲಿರುವ ಭೂಸ್ವಾಧೀನಾತಿ ದಾವಾ ಪ್ರಕರಣಗಳ ಹೊರತಾಗಿ ಉಳಿದ ಎಲ್ಲಾ ಪ್ರಕರಣಗಳಿಗೆ ಪರಿಹಾರ ಧನ ಪಾವತಿ ಮಾಡಲಾಗಿದೆ. ಈ ರೀತಿ ವಿವಿಧ ನ್ಯಾಯಾಲಯಗಳಲ್ಲಿ ಹಾಲಿ 41 ಪ್ರಕರಣಗಳು ಇತ್ಯರ್ಥವಾಗಬೇಕಾಗಿದ್ದು ಇವುಗಳ ಬಾಬ್ತು ಪಾವತಿಸಬೇಕಾದ ಪರಿಹಾರ ಮೊತ್ತವು ನ್ಯಾಯಾಲಯಗಳ ತೀರ್ಪಿನ ಮೇಲೆ ಅವಲಂಬಿತವಾಗಿದೆ. ಆದಾಗ್ಯೂ, ಅನಧಿಕೃತ ಅಧಿಕೃತ ಕಟ್ಟಡಗಳಿಗೆ, ಅನಧಿಕೃತ ಜಮೀನು ಹಾಗೂ ದಾವಾ ಪ್ರಕರಣಗಳಿಗಾಗಿ ಅಂದಾಜು 200.00 ಲಕ್ಷ ರೂ.ಗಳ ಪರಿಹಾರ ಧನ ನೀಡಬೇಕಾಗಿದೆ.

ಅ) ಈವರೆಗೆ ಶಿವಮೊಗ್ಗ ವಿಶೇಷ ಭೂ ಸ್ವಾಧೀನಾಧಿಕಾರಿಗಳು ವರದಿ ಮಾಡಿದಂತೆ ಹಾಲಿ ಇತ್ಯರ್ಥವಾಗಿರುವ 147 ಪ್ರಕರಣಗಳ ಬಾಬ್ತು ರೂ.80.00 ಲಕ್ಷಗಳಷ್ಟು ಪರಿಹಾರ ಪಾವತಿಸಬೇಕಾಗಿದೆ.

ಇ) ವಿವಿಧ ನ್ಯಾಯಾಲಯಗಳಲ್ಲಿರುವ ಭೂ ಸ್ವಾಧೀನಾತಿ ಪ್ರಕರಣಗಳ ಇತ್ಯರ್ಥಿತ ಹಣವನ್ನು ಕಾಲಕಾಲಕ್ಕೆ ಭೂಸ್ವಾಧೀನಾಧಿಕಾರಿಗಳು ಬಿಡುಗಡೆ ಮಾಡಲು ಅನುವಾಗುವಂತೆ, ನಿಗಮವು ಹಣವನ್ನು ಭೂಸ್ವಾಧೀನಾಧಿಕಾರಿಯ ಕಛೇರಿಯಲ್ಲಿ ಜಮಾ ಮಾಡಲಾಗುತ್ತದೆ ಇದರನ್ವಯ, ಜನವರಿ 98ರ ಮಾಹೆಯಲ್ಲಿ 10.00 ಲಕ್ಷ ರೂ.ಗಳನ್ನು ಮತ್ತು ಏಪ್ರಿಲ್ 98 ರಲ್ಲಿ 5.00 ಲಕ್ಷ ರೂ.ಗಳನ್ನು ಹಾಗೂ ಮೇ 98 ರಲ್ಲಿ 25.00 ಲಕ್ಷ ರೂ.ಗಳನ್ನು ಜಮಾ ಮಾಡಲಾಗಿದೆ. ಭೂಸ್ವಾಧೀನಾಧಿಕಾರಿಗಳ ಕಛೇರಿಯಲ್ಲಿ ಈಗ 39.84 ಲಕ್ಷ ರೂ.ಗಳು ಉಳಿದಿರುತ್ತದೆ. ಬಾಕಿ ಪಾವತಿಸಬೇಕಾದ30.00 ಲಕ್ಷ ರೂ.ಗಳನ್ನು ತುರ್ತಾಗಿ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಸೋಮವಾರ ಪೇಟೆ ತಾಲ್ಲೂಕಿನಲ್ಲಿ ವಿದ್ಯುತ್ ವೋಲ್ಟೇಜ್ ತೊಂದರೆ.

1788 - ಶ್ರೀ ಅಪ್ಪಚ್ಚುರಂಜನ್ ಎಂ.ಪಿ. (ಸೋಮವಾರ ಪೇಟೆ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಸೋಮವಾರ ಪೇಟೆ ತಾಲ್ಲೂಕಿನ ಕೊಡ್ಲಿಪೇಟೆ ಹೋಬಳಿಯಲ್ಲಿ ವಿದ್ಯುತ್ ವೋಲ್ಟೇಜ್ ತೊಂದರೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;*

ಆ) *ಹಾಗಿದ್ದಲ್ಲಿ, ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು;*

ಇ) *ಶನಿವಾರ ಸಂತೆಯಲ್ಲಿ 66 ಕೆ.ವಿ. ವಿದ್ಯುತ್ ಕೇಂದ್ರವನ್ನು ಯಾವಾಗ ಆಳವಡಿಸಲಾಗುವುದು?*

ಶ್ರೀ ಶರಣ ಬಸಪ್ಪ ದರ್ಶನಪುರ್ (ಇಂಧನ ರಾಜ್ಯ ಸಚಿವರು) :

ಅ) ಹೌದು.

ಆ) ಮತ್ತು (ಇ) ಕಡಿಮೆ ವೋಲ್ಟೇಜ್ ಪರಿಸ್ಥಿತಿಯನ್ನು ನಿವಾರಿಸುವ ಸಲುವಾಗಿ ಶನಿವಾರ ಸಂತೆಯಲ್ಲಿ ಒಂದು66 ಕೆವಿ ವಿದ್ಯುತ್ ವಿತರಣಾ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆಯನ್ನು ರೂಪಿಸಲು ಅಗತ್ಯವಾದ ಮಾಹಿತಿಗಳನ್ನು ಸಂಗ್ರಹಿಸಲಾಗುತ್ತಿದೆ. ಈ ಪ್ರಸ್ತಾವನೆಯನ್ನು ಮಂಡಳಿಯ ತಾಂತ್ರಿಕ ಸಮಿತಿಯ ಮುಂದೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಲಾಗುವುದು.

ಕೊಡಗು ಜಿಲ್ಲೆಯಲ್ಲಿ ಹಸಿರು ಮತ್ತು ಕೇಸರಿ ಕಾರ್ಡ್‌ಗಳ ವಿತರಣೆ.

1789 - ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರ ಪೇಟೆ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಕೊಡಗು ಜಿಲ್ಲೆಯಲ್ಲಿ ಎಷ್ಟು ಜನರಿಗೆ ಹಸಿರು ಮತ್ತು ಕೇಸರಿ ಕಾರ್ಡುಗಳನ್ನು ವಿತರಿಸಲಾಗಿದೆ; ಇನ್ನು ಎಷ್ಟು ಜನರಿಗೆ ಈ ಕಾರ್ಡ್‌ಗಳನ್ನು ವಿವರಿಸಬೇಕಾಗಿದೆ?*